CC No.924/2018

P.W.:1

ಈ ದಿನ ದಿ:07.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮಧ್ಯಂತರ ಅರ್ಜಿ ಆದೇಶ ದಿನಾಂಕ.23.01.2025ರ ಆಧಾರದ ಮೇಲೆ

ಪಾಟೀ ಸವಾಲು:- ಆರೋಪಿ ಪರ ವಕೀಲರಾದ ಶ್ರೀ ಎಂಎಂ ರವರಿಂದ:-

1. ನಮ್ಮ ತಟ್ಟೆಕೆರೆ ಗ್ರಾಮದಲ್ಲಿ ಕಣಿವೆಮಹದೇಶ್ವರ ದೇವಸ್ಥಾನ ಇದೆ ಎಂದರೆ ಸರಿ. ಸದರಿ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಒಂದು ಚೌಟ್ರಿ ಇದೆ ಎಂದರೆ ಸರಿ. ತಟ್ಟೆಕೆರೆ ಗ್ರಾಮದಲ್ಲಿ ಜಾನುವಾರುಗಳನ್ನು ಹರಾಜು ಹಾಕಲಾಗುತ್ತದೆ ಎಂದರೆ ಸರಿ. ಕಣಿವೆಮಹದೇಶ್ವರ ದೇವಸ್ಥಾನ ಕ್ಕೆ ಸಂಬಂಧಿಸಿದಂತೆ ಒಂದು ಟ್ರಸ್ಟ್ ಸಹ ಇದೆ ಎಂದರೆ ಸರಿ. ನಾನು ಸಹ ಸದರಿ ದೇವಸ್ಥಾನದ ಒಬ್ಬ ಟ್ರಸ್ಟಿ ಎಂದರೆ ಸರಿ. ನಾನು ಸದರಿ ಟ್ರಸ್ಟ್ ನಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಟ್ರಸ್ಟ್ ಗೆ ಸಂಬಂದಿಸಿದಂತೆ ಒಂದು ಜಂಟೀ ಬ್ಯಾಂಕ್ ಖಾತೆ ಇದೆ ಎಂದರೆ ಸರಿ. ಸದರಿ ಟ್ರಸ್ಟ್ ನ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾವು ಪ್ರತಿವರ್ಷ ಅಡಿಟ್ ಮಾಡಿಸುತ್ತೇವೆ. ಸದರಿ ದೇವಸ್ಥಾನದ ಹುಂಡಿಯ ಹಣ, ಚೌಟ್ರಿಯ ಹಣ ಮತ್ತು ಜಾನುವಾರುಗಳ ಹರಾಜಿನಿಂದ ಬರುವ ಹಣವನ್ನು ನಾವು ಸದರಿ ಟ್ರಸ್ಟ್ ಗೆ ಸಂಬಂಧಿಸಿದ ಬ್ಯಾಂಕ್ ಖಾತೆಯಲ್ಲಿ ಜಮಾ ಮಾಡುತ್ತೇವೆ ಎಂದರೆ ಸರಿ. ನಾನು 2012ನೇ ಸಾಲಿನಿಂದಲ್ಲೂ ಸದರಿ ಟ್ರಸ್ಟ್ ಗೆ ಸಂಬಂಧಿಸಿದ ಹಣಕಾಸಿನ ವ್ಯವಹಾರದ ಬಗ್ಗೆ ಯಾವುದೇ ಅಡಿಟ್ ಮಾಡಿಸಿಲ್ಲ ಎಂದರೆ ಸರಿಯಲ್ಲ. 2013ನೇ ಸಾಲಿನಿಂದ 2020ನೇ ಸಾಲಿನ ವರೆಗೂ ಸದರಿ ಟ್ರಸ್ಟ್ ಗೆ ಬಂದಂತಹ ಹಣವನ್ನು ನಾನು ಆ ಟ್ರಸ್ಟ್ ನ ಬ್ಯಾಂಕ್ ಖಾತೆಗೆ ಜಮಾ ಮಾಡದೆ ನನ್ನ ಸ್ವಂತ ಖಾತೆಗೆ ಜಮಾ ಮಾಡಿಕೊಂಡು ಆ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

2. ತಟ್ಟೆಕೆರೆ ಗ್ರಾಮಸ್ಥರು ಎಲ್ಲರೂ ಸದರಿ ದೇವಸ್ಥಾನದ ಟ್ರಸ್ಟ್ ನ ಹಣವನ್ನು ನಾನು

ದುರುಪಯೋಗ ಮಾಡಿಕೊಳ್ಳುತ್ತಿದ್ದೇನೆ ಎಂದು ನನ್ನನ್ನು ಬಂದು ಕೇಳಿದರು ಎಂದರೆ ಸರಿಯಲ್ಲ. ಈಗೆ ಕೇಳಿದವರ ಪೈಕಿ ಆರೋಪಿಯು ಸಹ ಒಬ್ಬರು ಎಂದರೆ ಸರಿಯಲ್ಲ. ಆರೋಪಿಗೆ ನಾನು ಸೋದರಮಾವನಾಗಬೇಕು ಎಂದರೆ ಸರಿ. ಆರೋಪಿ ನನ್ನ ಸಂಬಂಧಿಕನಾಗಿದ್ದರು ನನ್ನನ್ನು ಲೆಕ್ಕ ಕೇಳಿದ್ದಕ್ಕಾಗಿ ನನಗೂ ಆರೋಪಿಗೂ ಸಂಬಂಧದಲ್ಲಿ ಸರಿ ಇರಲಿಲ್ಲ ಎಂದರೆ ಸರಿಯಲ್ಲ.

3. ಮಂಗಳಮ್ಮ ರವರು ದಿನಾಂಕ.29.07.2017ರಂದು ನನ್ನ ವಿರುದ್ದ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಂಗಳಮ್ಮ ರವರು ಪೋನಿನಲ್ಲಿ ನಾನು ಅವರೊಂದಿಗೆ ಮಾತನಾಡಿದೆ ಎಂಬ ಕಾರಣಕ್ಕೆ ನನ್ನ ವಿರುದ್ದ ಸುಳ್ಳು ದೂರು ನೀಡಿದ್ದರು. ನಾನು ಮಂಗಳಮ್ಮ ರವರೊಂದಿಗೆ ಅಸಭ್ಯವಾಗಿ ಮಾತನಾಡಿ ಕಿರುಕುಳ ಕೊಡುತ್ತಿದ್ದೆ ಆದ್ದರಿಂದ ಅವರು ನನ್ನ ವಿರುದ್ದ ಪೊಲೀಸ್ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಮಂಗಳಮ್ಮ ರವರು ಕೊಟ್ಟ ದೂರಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದೆ ಇದ್ದರು ಆರೋಪಿಯ ಪ್ರಚೋದನೆಯಿಂದಲೆ ಮಂಗಳಮ್ಮ ರವರು ನನ್ನ ವಿರುದ್ದ ದೂರು ಸಲ್ಲಿಸಿರುತ್ತಾರೆ ಎಂದು ಊಹೆ ಮಾಡಿಕೊಂಡು ನಾನು ಆರೋಪಿಯ ವಿರುದ್ದ ಈ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

4. ದಿನಾಂಕ.08.09.2017ರಂದು ಸಂಜೆ 5ಃ00 ಗಂಟೆ ಸಮಯದಲ್ಲಿ ನಾನು ಹಾರೋಹಳ್ಳಿ ಪೊಲೀಸ್ ಠಾಣೆಯಿಂದ ವಾಪಸ್ಸು ಬಂದಿಲ್ಲ, ಬರುವ ದಾರಿಯಲ್ಲಿ ಆರೋಪಿ ಮತ್ತು ಶಿವಶಂಕರ್ ಎನ್ನುವವರು ನನ್ನನ್ನು ಅಡ್ಡಗಟ್ಟಿಲ್ಲ ಮತ್ತು ನನ್ನ ಪ್ಯಾಂಟಿನ ಜೇಬಿನಲಿದ್ದ 2000 ರೂಪಾಯಿಗಳನ್ನು ಅವರು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಆದೇ ದಿನ ಸಂಜೆ 6ಃ00 ಗಂಟೆಗೆ ಪೊಲೀಸ್ ಠಾಣೆಯಲ್ಲಿ ಆರೋಪಿಯ ವಿರುದ್ದ ದೂರು ನೀಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರನ್ನು ಯಾರು ಬರೆದರು

ಎಂದು ಖಚಿತವಾಗಿ ನನಗೆ ಹೇಳಲು ಆಗುವುದಿಲ್ಲ. ದೂರಿನ ಬರೆದ ಸಂಗತಿಗಳು ನನಗೆ ಗೊತ್ತು. ನಾನು ಇಬ್ಬರ ವಿರುದ್ದ ದೂರು ನೀಡಿರುತ್ತೇನೆ. ಆ ದಿನ ಸ್ಥಳದಲ್ಲಿ ನಾಗೇಶ್ ಮತ್ತು ತಟ್ಟೆಕೆರೆ ಗ್ರಾಮದ ಮಹದೇವಯ್ಯ ರವರು ಇದ್ದರು ಎಂದು ನನ್ನ ದೂರಿನಲ್ಲಿ ಹೇಳಿ ಬರೆಸಿರುತ್ತೇನೆ. ದೂರಿನಲ್ಲಿ ಮಹದೇವಯ್ಯ ಮತ್ತು ನಾಗೇಶ್ ರವರು ಸ್ಥಳದಲ್ಲಿ ಇದ್ದರು ಎಂಬ ಬಗ್ಗೆ ನಾನು ಬರೆಸದೆ ಇದ್ದರು ಬರೆಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ದೂರಿನಲ್ಲಿ ಅವರ ಹೆಸರು ಬರೆಸಿದ್ದೆ ಅದರೆ ಪೊಲೀಸರು ಅವರ ಹೆಸರನ್ನು ತೆಗೆದು ಬೇರೆಯವರ ಹೆಸರನ್ನು ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

5. ಪೊಲೀಸರು ದಿನಾಂಕ.09.11.2017ರಂದು ಸ್ಥಳಕ್ಕೆ ಬೆಳಿಗ್ಗೆ 10.30 ರಿಂದ 11.00 ಗಂಟೆ ಸಮಯದಲ್ಲಿ ಬಂದಿದ್ದರು. ಪೊಲೀಸರು ಒಂದು ಕಾಲುಗಂಟೆಯವರೆಗೂ ಸ್ಥಳದಲ್ಲಿ ಇದ್ದರು. ಪೊಲೀಸರು ಸ್ಥಳಕ್ಕೆ ಬಂದ ಸಮಯದಲ್ಲಿ ನಾನು, ಮಹದೇವಯ್ಯ ಮತ್ತು ನಾಗೇಶ್ ರವರು ಸ್ಥಳದಲ್ಲಿದ್ದೇವು. ಪೊಲೀಸರು ದಿನಾಂಕ.09.11.2017ರಂದು ಸ್ಥಳಕ್ಕೆ ಬಂದಿಲ್ಲ, ಆ ಸಮಯದಲ್ಲಿ ನಾನು, ನಾಗೇಶ್ ಮತ್ತು ಮಹದೇವಯ್ಯ ರವರು ಸ್ಥಳದಲ್ಲಿ ಇರಲೆ ಇಲ್ಲ ಎಂದರೆ ಸರಿಯಲ್ಲ.

6. ನಿಪಿ-2 ಕ್ಕೆ ನಾನು ಸಹಿಯನ್ನು ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿ. ನೀವು ಆರೋಪಿಯ ವಿರುದ್ದ ಅವರಿಗೆ ಮಾನಹಾನಿಯಾಗುವಂತಹ ಹೇಳಿಕೆಯನ್ನು ಕೊಟ್ಟು ಪ್ರತಿಕ ಪ್ರಕಟಣೆ ಮಾಡಿಸಿದ್ರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನ್ನ ಬಗ್ಗೆ ಕೆಟ್ಟದಾಗಿ ಸುಳ್ಳು ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಆರೋಪಿಯ ಬಗ್ಗೆ ನಾನು ಪತ್ರಿಕ ಪ್ರಕಟಣೆ ಮಾಡಿಸಿದ್ದು ನಿಜ ಎಂದು ನುಡಿಯುತ್ತಾರೆ. ಆರೋಪಿ ಮತ್ತು ಶಿವಶಂಕರ್ ರವರು ನಾನು ಅವರ ಬಗ್ಗೆ ಕೆಟ್ಟದಾಗಿ ಅಪಪ್ರಚಾರ ಮಾಡಿ ಅವರ ಗೌರವಕ್ಕೆ ಹಾನಿ ತಂದಕಾರಣಕ್ಕೆ ನನ್ನ ವಿರುದ್ದ ಆಸಲು

ದಾವಾ ನಂ.106/2018ರಡಿಯಲ್ಲಿ ಮಾನನಷ್ಟ ಮೊಕದ್ದಮೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಅವರ ವಿರುದ್ದ ಮಾನನಷ್ಟ ಮೊಕದ್ದಮೆ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಅವರ ವಿರುದ್ದ ಯಾವುದೇ ಮಾನನಷ್ಟ ಮೊಕದ್ದಮೆ ಹೂಡಿಲ್ಲ ಎಂದರೆ ಸರಿಯಲ್ಲ.

7. ಆರೋಪಿತರು ನನ್ನನ್ನು ಅಡ್ಡಗಟ್ಟಿ ನನ್ನಿಂದ ಯಾವುದೇ ಹಣವನ್ನು ತೆಗೆದುಕೊಳ್ಳದೆ ಇದ್ದರು ಅವರ ಮೇಲೆ ಇದ್ದ ದ್ವೇಷದಿಂದಾಗಿ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2ನ್ನು ಪೊಲೀಸರು ಸ್ಥಳದಲ್ಲಿ ತಯಾರಿಸಿಲ್ಲ, ಅದನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಠಾಣೆಯಲ್ಲಿ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**

CC No.924/2018
P.W.:1